# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** | : | **592 (74)** |
| **ಮಾನ್ಯ ಸದಸ್ಯರ ಹೆಸರು** | : | **ಶ್ರೀ ಎಂ.ಎಲ್. ಅನಿಲ್‌ಕುಮಾರ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)** |
| **ಉತ್ತರಿಸುವ ದಿನಾಂಕ** | : | **20.02.2024** |
| **ಉತ್ತರಿಸುವ ಸಚಿವರು** | : | **ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು** |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಕಳೆದ 3 ವರ್ಷದಿಂದ ಇಲ್ಲಿಯವರೆಗೆ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಕೆ.ಐ.ಎ.ಡಿ.ಬಿ. ವತಿಯಿಂದ ಕೈಗಾರಿಕೆ ಅಭಿವೃದ್ಧಿ ಹಾಗೂ ಕೈಗಾರಿಕೆ ಉಪಯೋಗಕ್ಕಾಗಿ ಸ್ವಾಧೀನಪಡಿಸಿಕೊಂಡಿರುವ ಭೂಮಿಯ ವಿಸ್ತೀರ್ಣ ಎಷ್ಟು; ಹಾಗೂ ಎಲ್ಲೆಲ್ಲಿ ವಶಪಡಿಸಿ ಕೊಳ್ಳಲಾಗಿದೆ; (ತಾಲ್ಲೂಕುವಾರು ಸಂಪೂರ್ಣವಾದ ಮಾಹಿತಿ ನೀಡುವುದು) | **ಕೋಲಾರ ಜಿಲ್ಲೆ :**<br><br>ಕಳೆದ 3 ವರ್ಷದಿಂದ ಇಲ್ಲಿಯವರೆಗೆ ಕೋಲಾರ ಜಿಲ್ಲೆಯಲ್ಲಿ ಕೈಗಾರಿಕಾ ಉದ್ದೇಶಕ್ಕಾಗಿ ಒಟ್ಟು 1535-04¼ ಎಕರೆ-ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ.<br><br>ತಾಲ್ಲೂಕುವಾರು ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ.<br><br>ಅಲ್ಲದೇ, ಕೋಲಾರ ಜಿಲ್ಲೆ, ಮಾಲೂರು ತಾಲ್ಲೂಕು, ಬಾವನಹಳ್ಳಿ ಗ್ರಾಮದಲ್ಲಿ ಹೆಚ್ಚುವರಿಯಾಗಿ 70-21¼ ಎಕರೆ-ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ದಿನಾಂಕ:04.09.2023 ರಂದು ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದೆ. ಸದರಿ ಜಮೀನಿಗೆ ಅಂತಿಮ ಅಧಿಸೂಚನೆ ಹೊರಡಿಸಲು ಬಾಕಿ ಇರುತ್ತದೆ.<br><br>**ಚಿಕ್ಕಬಳ್ಳಾಪುರ ಜಿಲ್ಲೆ:**<br><br>ಕಳೆದ 3 ವರ್ಷದಿಂದ ಇಲ್ಲಿಯವರೆಗೆ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಕೈಗಾರಿಕಾ ಉದ್ದೇಶಕ್ಕಾಗಿ ಒಟ್ಟು 1235-21 ಎಕರೆ-ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ.<br><br>ತಾಲ್ಲೂಕುವಾರು ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ.<br><br>ಮಸ್ತೇನಹಳ್ಳಿ 3ನೇ ಹಂತದ ಕೈಗಾರಿಕಾ ಪ್ರದೇಶಾಭಿವೃದ್ಧಿಗಾಗಿ ಚಿಕ್ಕಬಳ್ಳಾಪುರ ಜಿಲ್ಲೆ, ಶಿಡ್ಲಘಟ್ಟ ತಾಲ್ಲೂಕು, ಕಸಬಾ ಹೋಬಳಿ, ಹಲಸೂರುದಿನ್ನೆ, ಚಿಂತುಡಪಿ, ಗೋರಮಡಗು ಹಾಗೂ ಚಿಂತಾಮಣಿ ತಾಲ್ಲೂಕು ಕೈವಾರ ಹೋಬಳಿ, ಸಿಂಗೇಹಳ್ಳಿ, ಮಾರಪಲ್ಲಿ, ತಳಗವಾರ ಮತ್ತು ಮಸ್ತೇನಹಳ್ಳಿ ಗ್ರಾಮಗಳಲ್ಲಿ ಒಟ್ಟು 1235-21 ಎಕರೆ-ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ದಿನಾಂಕ: 06.06.2022 ರಂದು ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದೆ. ಸದರಿ ಜಮೀನಿಗೆ |

| | | |
|---|---|---|
| | | ಅಂತಿಮ ಅಧಿಸೂಚನೆ ಹೊರಡಿಸಲು ಬಾಕಿ ಇರುತ್ತದೆ.<br><br>ಕುಡುಮಲಕುಂಟೆ 3ನೇ ಹಂತದ ಕೈಗಾರಿಕಾ ಪ್ರದೇಶಕ್ಕೆ ಹೆಚ್ಚುವರಿಯಾಗಿ ಚಿಕ್ಕಬಳ್ಳಾಪುರ ಜಿಲ್ಲೆ, ಗೌರಿಬಿದನೂರು ತಾಲ್ಲೂಕು, ಕಸಬಾ ಹೋಬಳಿ, ಜರಬಂಡನಹಳ್ಳಿ ಮತ್ತು ಗೌಡಸಂದ್ರ ಗ್ರಾಮಗಳಲ್ಲಿನ ಒಟ್ಟು 474-18 ಎಕರೆ-ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ದಿನಾಂಕ:16.05.2023 ರಂದು ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದೆ. ಸದರಿ ಜಮೀನಿಗೆ ಅಂತಿಮ ಅಧಿಸೂಚನೆ ಹೊರಡಿಸಲು ಬಾಕಿ ಇರುತ್ತದೆ. |
| ಆ | ಕೆ.ಐ.ಎ.ಡಿ.ಬಿ.ಯವರು ರೈತರ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳುವಾಗ ಅನುಸರಿಸುವ ಮಾನದಂಡಗಳೇನು; ರೈತರ ಜಮೀನನ್ನು ಸ್ವಾಧೀನಪಡಿಸಿ ಕೊಳ್ಳುವಾಗ ಸಂಬಂಧಪಟ್ಟ ರೈತರಿಗೆ ಪ್ರತಿ ಎಕರೆಗೆ ಕೆ.ಐ.ಎ.ಡಿ.ಬಿ ಯವರು ಎಷ್ಟು ಪ್ರಮಾಣದ ಪರಿಹಾರ ಧನವನ್ನು ನಿಗಧಿಪಡಿಸಿರುತ್ತಾರೆ;(ಸಂಪೂರ್ಣ ಮಾಹಿತಿ ನೀಡುವುದು) | ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ ಕಲಂ 1966ರ ನಿಯಮಗಳು ಹಾಗೂ ಭೂಸ್ವಾಧೀನ ಪ್ರಕ್ರಿಯೆಗೆ ಸಂಬಂಧಿಸಿದಂತೆ ಸರ್ಕಾರವು ದಿನಾಂಕ:18-03-2013ರಂದು ಹೊರಡಿಸಿರುವ ಸುತ್ತೋಲೆಯಲ್ಲಿನ ನಿರ್ದೇಶನದನುಸಾರ ಜಮೀನನ್ನು ಭೂಸ್ವಾಧೀನಪಡಿಸಲು ಕ್ರಮ ವಹಿಸಲಾಗುತ್ತಿದೆ. ಸುತ್ತೋಲೆ ಪ್ರತಿಯನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ.<br><br>ಭೂದರ ಸಲಹಾಸಮಿತಿ ಸಭೆ ಏರ್ಪಡಿಸಿ ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳು, ವಿಶೇಷ ಜಿಲ್ಲಾಧಿಕಾರಿಗಳು ಕೆಐಎಡಿಬಿ, ವಿಶೇಷ ಭೂಸ್ವಾಧೀನಾಧಿಕಾರಿಗಳು, ಉಪನೋಂದಣಾಧಿಕಾರಿಗಳು ಇತರೆ ಅಧಿಕಾರಿಗಳ ಸಮಕ್ಷಮದಲ್ಲಿ ರೈತರೊಂದಿಗೆ ಚರ್ಚಿಸಿ ದರ ನಿಗಧಿಪಡಿಸಿ ತೀರ್ಮಾನ ಮಾಡಿದ. ನಂತರ ಸದರಿ ದರವನ್ನು ಮಂಡಳಿಯ ಸಭೆಯ ಅನುಮೋದನೆ ಪಡೆದು ಕಲಂ 29(2)ರಂತೆ ನೋಟೀಸ್ ಜಾರಿ ಮಾಡಿ ದಾಖಲಾತಿಗಳನ್ನು ರೈತರಿಂದ ಪಡೆದು ಪರಿಶೀಲಿಸಿ ನಿಯಮಾನುಸಾರ ಭೂಪರಿಹಾರ ಪಾವತಿಗೆ ಕ್ರಮ ಕೈಗೊಳ್ಳಲಾಗುತ್ತದೆ. |
| ಇ | ಈವರೆಗೂ ಜಮೀನು ಕಳೆದುಕೊಂಡಿರುವ ರೈತರಿಗೆ ಉದ್ಯೋಗ ನೀಡುವ ಬಗ್ಗೆ ಸರ್ಕಾರದ ನಿಲುವೇನು; ಉದ್ಯೋಗ ನೀಡಲಾಗಿದೆಯೇ; (ಸಂಪೂರ್ಣವಾದ ಮಾಹಿತಿ ನೀಡುವುದು) | ಮಂಡಳಿಯು ರೈತರ ಜಮೀನನ್ನು ಕೈಗಾರಿಕಾ ಉದ್ದೇಶಕ್ಕಾಗಿ ಭೂಸ್ವಾಧೀನಪಡಿಸಿಕೊಂಡ ನಂತರ ನಿವೇಶನ ಹಂಚಿಕೆ ಮಾಡುವ ಸಂದರ್ಭದಲ್ಲಿ ಮಂಡಳಿಯ ನಿಯಮಾನುಸಾರ ಭೂ ಮಾಲೀಕರ ಕುಟುಂಬದ ಒಬ್ಬ ಸದಸ್ಯರಿಗೆ ಉದ್ಯೋಗ ನೀಡಲು ಕಂಪನಿಗಳಿಗೆ ಷರತ್ತನ್ನು ವಿಧಿಸಲಾಗುತ್ತದೆ.<br><br>ಕಳೆದ 3 ವರ್ಷಗಳ ಅವಧಿಯಲ್ಲಿ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಕೈಗಾರಿಕೆಗಳು ವಿವಿಧ ಅಭಿವೃದ್ಧಿಯ ಹಂತದಲ್ಲಿದ್ದು, ಕೈಗಾರಿಕೆಗಳು ಪ್ರಾರಂಭವಾದ ನಂತರ ಭೂ ಮಾಲೀಕರ ಕುಟುಂಬದ ಒಬ್ಬ ಸದಸ್ಯರಿಗೆ ಉದ್ಯೋಗ ನೀಡಲು ಕ್ರಮ ವಹಿಸಲಾಗುತ್ತದೆ. |

**ಈ** ಕೋಲಾರ ಜಿಲ್ಲೆಯ ವೇಮಗಲ್, ನರಸಾಪುರ ಹಾಗೂ ಮಾಲೂರಿನಲ್ಲಿ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಇಲಾಖೆಯಲ್ಲಿ ಬರುವ ಕಾರ್ಖಾನೆ ಮತ್ತು ಕೈಗಾರಿಕೆಗಳೆಷ್ಟು; ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರ ಸಂಖ್ಯೆ ಎಷ್ಟು; ಸದರಿ ಕೈಗಾರಿಕೆಗಳಲ್ಲಿ ಕೆಲಸ ಮಾಡುತ್ತಿರುವ ಸ್ಥಳೀಯರ ಸಂಖ್ಯೆ ಎಷ್ಟು; (ಸಂಖ್ಯಾವಾರು ಸಂಕ್ಷಿಪ್ತವಾದ ಮಾಹಿತಿಯನ್ನು ನೀಡುವುದು)

ವೇಮಗಲ್, ನರಸಾಪುರ ಹಾಗೂ ಮಾಲೂರು ಕೈಗಾರಿಕಾ ಪ್ರದೇಶಗಳಲ್ಲಿರುವ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ವಿವರ ಈ ಕೆಳಕಂಡಂತಿದೆ.

| | ಬೃಹತ್ ಕೈಗಾರಿಕೆಗಳು | | |
|---|---|---|---|
| ಕೈಗಾರಿಕಾ ಪ್ರದೇಶ | ಘಟಕಗಳ ಸಂಖ್ಯೆ | ಒಟ್ಟು ಕಾರ್ಮಿಕರ ಸಂಖ್ಯೆ | ಸ್ಥಳಿಯ ಕಾರ್ಮಿಕರ ಸಂಖ್ಯೆ |
| ವೇಮಗಲ್ | 04 | 1029 | 930 |
| ನರಸಾಪುರ | 18 | 36271 | 28538 |
| ಮಾಲೂರು | 10 | 1996 | 1734 |
| **ಒಟ್ಟು** | **32** | **39296** | **31202 (79.4%)** |

| | ಮಧ್ಯಮ ಕೈಗಾರಿಕೆಗಳು | | |
|---|---|---|---|
| ಕೈಗಾರಿಕಾ ಪ್ರದೇಶ | ಘಟಕಗಳ ಸಂಖ್ಯೆ | ಒಟ್ಟು ಕಾರ್ಮಿಕರ ಸಂಖ್ಯೆ | ಸ್ಥಳಿಯ ಕಾರ್ಮಿಕರ ಸಂಖ್ಯೆ |
| ವೇಮಗಲ್ | 01 | 44 | 32 |
| ನರಸಾಪುರ | 02 | 428 | 424 |
| ಮಾಲೂರು | 13 | 3240 | 2529 |
| **ಒಟ್ಟು** | **16** | **3712** | **2985 (80.4%)** |

**ಉ** ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಇಲಾಖೆಯಡಿಯಲ್ಲಿ ಬರುವ ಕೈಗಾರಿಕಾ ಹಾಗೂ ಕಾರ್ಖಾನೆಯಲ್ಲಿ ಎಷ್ಟು ವೃಂದವಾಗಿ ಕಾರ್ಯವನ್ನು ವಿಭಜಿಸಲಾಗಿದೆ; ಎ ಮತ್ತು ಬಿ ವೃಂದದ ಉದ್ಯೋಗದಲ್ಲಿ ಎಷ್ಟು ಜನ ಸ್ಥಳೀಯರು ಕಾರ್ಯನಿರ್ವಹಿಸುತ್ತಿದ್ದಾರೆ; ಸ್ಥಳೀಯರಿಗೆ ಕೆಲಸ/ಉದ್ಯೋಗ ನೀಡುವ ಸಲುವಾಗಿ ಸದರಿ ಕೈಗಾರಿಕೆಗಳು ಮತ್ತು ಕಾರ್ಖಾನೆಗಳಲ್ಲಿರುವ

ಕೋಲಾರ ಜಿಲ್ಲೆಯಲ್ಲಿ ಒಟ್ಟು 37 ಬೃಹತ್ ಕೈಗಾರಿಕೆಗಳು ಮತ್ತು 19 ಮಧ್ಯಮ ಕೈಗಾರಿಕೆಗಳು ಇರುತ್ತವೆ. ಸದರಿ ಕೈಗಾರಿಕೆಗಳಲ್ಲಿ ಉದ್ಯೋಗಿಗಳನ್ನು ಅವರ ಶ್ರೇಣಿಗನುಸಾರವಾಗಿ ಎ- ವರ್ಗ, ಬಿ- ವರ್ಗ, ಸಿ- ವರ್ಗ ಮತ್ತು ಡಿ- ವರ್ಗಗಳೆಂದು ವಿಭಜಿಸಲಾಗಿದೆ.

ಕೈಗಾರಿಕಾ ನೀತಿ 2020-25ರನ್ವಯ ಉತ್ತೇಜನ ಮತ್ತು ರಿಯಾಯಿತಿಗಳನ್ನು ಪಡೆಯಲು ಡಿ-ವರ್ಗದಲ್ಲಿ ಶೇಕಡ 100 ರಷ್ಟು ಹಾಗೂ ಒಟ್ಟಾರೆಯಾಗಿ ಶೇಕಡ 70 ರಷ್ಟು ಕನ್ನಡಿಗರಿಗೆ ಉದ್ಯೋಗ ನೀಡಬೇಕಾಗಿರುತ್ತದೆ.

ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳಲ್ಲಿ ಎ-ವರ್ಗ ಮತ್ತು ಬಿ-ವರ್ಗದ ಸ್ಥಳೀಯರ ವಿವರಗಳು ಕೆಳಕಂಡಂತಿದೆ.

| | ಮಾನದಂಡವೇನು? (ಸಂಖ್ಯಾವಾರು ಸಂಕ್ಷಿಪ್ತವಾದ ಮಾಹಿತಿಯನ್ನು ನೀಡುವುದು) | | |
|---|---|---|---|

| ಬೃಹತ್ ಕೈಗಾರಿಕೆಗಳು | | |
|---|---|---|
| ಘಟಕಗಳ ಸಂಖ್ಯೆ | ಎ–ವರ್ಗ ಸ್ಥಳೀಯರು | ಬಿ–ವರ್ಗ ಸ್ಥಳೀಯರು |
| 37 | 297(54%) | 3481(67%) |

| ಮಧ್ಯಮ ಕೈಗಾರಿಕೆಗಳು | | |
|---|---|---|
| ಘಟಕಗಳ ಸಂಖ್ಯೆ | ಎ–ವರ್ಗ ಸ್ಥಳೀಯರು | ಬಿ–ವರ್ಗ ಸ್ಥಳೀಯರು |
| 19 | 58(77%) | 304(76%) |

**ಸಂಖ್ಯೆ: ಸಿಐ 75 ಐಎಪಿ 2024**

**(ಎಂ.ಬಿ. ಪಾಟೀಲ)**
**ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು.**

## ಅನುಬಂಧ-1

**ಕಳೆದ ಮೂರು ವರ್ಷಗಳ ಅವಧಿಯಲ್ಲಿ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಕೆ.ಐ.ಎ.ಡಿ.ಬಿ ವತಿಯಿಂದ ಕೈಗಾರಿಕಾ ಅಭಿವೃದ್ಧಿ ಹಾಗೂ ಕೈಗಾರಿಕಾ ಉಪಯೋಗಕ್ಕಾಗಿ ಸ್ವಾಧೀನಪಡಿಸಿಕೊಂಡಿರುವ ಜಮೀನುಗಳ ವಿವರ.**

| ಕ್ರ ಸಂ | ಕೈಗಾರಿಕಾ ಪ್ರದೇಶದ ಹೆಸರು | ಗ್ರಾಮ, ತಾಲ್ಲೂಕು, | ಒಟ್ಟು ವಿಸ್ತೀರ್ಣ ಎ-ಗು | ಎಕರೆ ಒಂದಕ್ಕೆ ನಿಗಧಿಪಡಿಸಿರುವ ದರ (ರೂ.ಲಕ್ಷಗಳಲ್ಲಿ) | ಅಂತಿಮ ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ: |
|---|---|---|---|---|---|
| **ಕೋಲಾರ ಜಿಲ್ಲೆ** | | | | | |
| 1 | ನರಸಾಪುರ 2ನೇ ಹಂತ | ಮಿಂಡಹಳ್ಳಿ, ಕೋಲಾರ ತಾ॥ | 333-35¾ | 105.00 | ಸಿಐ 126 ಎಸ್‌ಪಿಕ್ಯೂ(ಇ) 2020 ದಿ:28-07-2020. |
| 2 | ನರಸಾಪುರ ವಿಸ್ಟ್ರಾನ್ ಕಂಪನಿ (ಹೆಚ್ಚುವರಿ) | ಅಚ್ಚಟ್ಟನಹಳ್ಳಿ, ಕೋಲಾರ ತಾ॥ | 15-35 | 115.25 | ಸಿಐ 100 ಎಸ್‌ಪಿಕ್ಯೂ(ಇ) 2022 ದಿ:19-04-2022. |
| 3 | ನರಸಾಪುರ (ಹೆಚ್ಚುವರಿ) | ಅಚ್ಚಟ್ಟನಹಳ್ಳಿ, ಕೋಲಾರ ತಾ॥ | 5-35 | 105.00 | ಸಿಐ 152 ಎಸ್‌ಪಿಕ್ಯೂ(ಇ) 2020 ದಿ:12-08-2020. |
| 4 | ನರಸಾಪುರ 3ನೇ ಹಂತ | ಬಾವನಹಳ್ಳಿ, ಮಾಲೂರು ತಾ॥ | 722-2¼ | 115.25 | ಸಿಐ 250 ಎಸ್‌ಪಿಕ್ಯೂ(ಇ) 2020 ದಿ:02-06-2022. |
| 5 | ವೇಮಗಲ್ 2ನೇ ಹಂತ | ವೇಮಗಲ್, ಕೋಲಾರ ತಾ॥ | 457-37¼ | 115.25 | ಸಿಐ 156 ಎಸ್‌ಪಿಕ್ಯೂ(ಇ) 2020 ದಿ:21-01-2023. |
| | | ಒಟ್ಟು | **1535-04¼** | | |
| **ಚಿಕ್ಕಬಳ್ಳಾಪುರ ಜಿಲ್ಲೆ** | | | | | |
| 1 | ಮಸ್ತೇನಹಳ್ಳಿ 2ನೇ ಹಂತ | ತಳಗವಾರ, ಮಾರಪಲ್ಲಿ, ಮಲ್ಲಾಪುರ ಮತ್ತು ಮಸ್ತೇನಹಳ್ಳಿ, ಚಿಂತಾಮಣಿ ತಾ॥ | 414-25 | 42.00 ರಿಂದ 60.00 | ಸಿಐ 08 ಎಸ್‌ಪಿಕ್ಯೂ(ಇ) 2020 ದಿ:21-05-2020. |
| 2 | ಕುಡುಮಲಕುಂಟೆ 3ನೇ ಹಂತ | ಗೌಡಸಂದ್ರ, ದೊಡ್ಡಕುರಗೋಡು, ಗೌರಿಬಿದನೂರು ತಾ॥ | 820-36 | 50.00 | ಸಿಐ 52 ಎಸ್‌ಪಿಕ್ಯೂ(ಇ) 2019 ದಿ:19-08-2022. |
| | | ಒಟ್ಟು | **1235-21** | | |

SPL-DC
K.I.A.D.B.

ಅನುಬಂಧ - 2
18

# ಕರ್ನಾಟಕ ಸರ್ಕಾರ

ಸಂಖ್ಯೆ: ಸಿಐ 590 ಎಸ್‌ಪಿಕ್ಯೂ 2012

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ: 18.03.2013

## ಸುತ್ತೋಲೆ

ವಿಷಯ: ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಕೈಗಾರಿಕಾ ಉದ್ದೇಶಕ್ಕಾಗಿ ಜಮೀನುಗಳನ್ನು ಭೂಸ್ವಾಧೀನಪಡಿಸಲು ಅನುಸರಿಸಬೇಕಾದ ವಿಧಾನಗಳ ಬಗ್ಗೆ

* * * *

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ಕೈಗಾರಿಕಾ ಉದ್ದೇಶಕ್ಕಾಗಿ / ಏಕ ಘಟಕ ಸಂಕೀರ್ಣ ಯೋಜನೆಗಳಿಗಾಗಿ ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಳ್ಳುತ್ತಿದ್ದು, ಈ ಕೆಳಕಂಡ ಪ್ರಕರಣಗಳಲ್ಲಿ ಸರಿಯಾಗಿ ಪರಿಶೀಲಿಸದೆಯೇ ಕೆ.ಐ.ಎ.ಡಿ.ಬಿ.ಯು ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

1. ಕೆ.ಐ.ಎ.ಡಿ. ಕಾಯ್ದೆ ಕಲಂ 28(1)ರ ಪ್ರಾಥಮಿಕ ಅಧಿಸೂಚನೆಯಲ್ಲಿ ದೇವಸ್ಥಾನ, ಶಾಲೆಗಳು, ಸ್ಮಶಾನಗಳು ಮತ್ತು ವಾಸದ ಮನೆಗಳು ಸೇರಿರುತ್ತವೆ.
2. ಹಾಲಿ ನಡೆಯುತ್ತಿರುವ ವಿವಿಧ ಕೈಗಾರಿಕೆಗಳು / ರೋಗಗ್ರಸ್ಥ ಕೈಗಾರಿಕಾ ಘಟಕಗಳು ಹೊಂದಿರುವ ಜಮೀನುಗಳು ಸೇರಿರುತ್ತವೆ.
3. ಸ್ಥಳೀಯ ಯೋಜನಾ ಪ್ರಾಧಿಕಾರಗಳು ವಸತಿ ಉದ್ದೇಶಕ್ಕೆ ಅನುಮೋದಿಸಲ್ಪಟ್ಟಿರುವ ಜಮೀನುಗಳು / ಸರ್ಕಾರದ ಭೂ ಬದಲಾವಣೆಗೊಂಡಿರುವ ಜಮೀನುಗಳು / ಜಿಲ್ಲಾಧಿಕಾರಿಗಳು ಭೂ ಪರಿವರ್ತನೆ ನೀಡಿರುವ ಪ್ರಕರಣಗಳಿಗೆ ಸಂಬಂಧಿಸಿದ ಜಮೀನುಗಳು ಸೇರಿರುತ್ತವೆ.
4. ತೋಟಗಳು, ಫಲವತ್ತಾದ ಜಮೀನು ಹಾಗೂ ವರ್ಷಕ್ಕೆ 2 ಬೆಳೆ ಬೆಳೆಯುವ ಜಮೀನುಗಳು, ತರಿ ಜಮೀನುಗಳು ಸೇರಿರುತ್ತವೆ.

ಕೆ.ಐ.ಎ.ಡಿ. ಕಾಯ್ದೆ ಕಲಂ 28(4)ರಡಿ ಅಂತಿಮ ಅಧಿಸೂಚನೆಯನ್ನು ತಯಾರಿಸುವಾಗ ಮೇಲೆ ಹೇಳಿದ ಜಮೀನುಗಳನ್ನು ಹೊರತುಪಡಿಸಿ, ಕೆ.ಐ.ಎ.ಡಿ. ಕಾಯ್ದೆ ಕಲಂ 4ರಡಿ ಅಧಿಸೂಚನೆಯನ್ನು ಹೊರಡಿಸಲಾಗುತ್ತಿದೆ. ಇದರಿಂದಾಗಿ ಪ್ರಾಥಮಿಕ ಅಧಿಸೂಚನೆ ವಿಸ್ತೀರ್ಣಕ್ಕೂ, ಅಂತಿಮ ಅಧಿಸೂಚನೆಯಲ್ಲಿನ ವಿಸ್ತೀರ್ಣಕ್ಕೂ ವ್ಯತ್ಯಾಸ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

. . . . 2

ಈ ನ್ಯೂನತೆಗಳನ್ನು ಸರಿಪಡಿಸಲು ಈ ಹಿಂದೆ ದಿನಾಂಕ: 03.03.2007ರಂದು ಹೊರಡಿಸಲಾದ ಸುತ್ತೋಲೆ ಸಂಖ್ಯೆ: ಸಿಐ 151 ಎಸ್‌ಪಿಕ್ಯೂ 2007ನ್ನು ಈ ಕೆಳಕಂಡ ಅಂಶಗಳಿಗೆ ಸಂಬಂಧಿಸಿದಂತೆ ಭಾಗಶಃ ಮಾರ್ಪಡಿಸಲಾಗಿದೆ.

ಕೆ.ಐ.ಎ.ಡಿ.ಬಿ. ವತಿಯಿಂದ ಕೈಗಾರಿಕಾ ಉದ್ದೇಶಕ್ಕೆ / ಏಕ ಘಟಕ ಸಂಕೀರ್ಣ ಯೋಜನೆಗಳಿಗೆ ಜಮೀನುಗಳನ್ನು ಭೂಸ್ವಾಧೀನಪಡಿಸಲು ಪ್ರಾಥಮಿಕ ಅಧಿಸೂಚನೆಯನ್ನು ತಯಾರಿಸುವ ಸಂದರ್ಭದಲ್ಲಿ ಇನ್ನು ಮುಂದೆ ಈ ಕೆಳಕಂಡ ವಿಧಾನವನ್ನು ಪಾಲಿಸಲು ಈ ಮೂಲಕ ಸೂಚಿಸಲಾಗಿದೆ.:

1. ಪ್ರಾಥಮಿಕ ಅಧಿಸೂಚನೆ ಪ್ರಸ್ತಾವನೆಯನ್ನು ಸಿದ್ಧಪಡಿಸುವ ಮೊದಲು ವಿಶೇಷ ಭೂಸ್ವಾಧೀನಾಧಿಕಾರಿಯವರು ಪ್ರಸ್ತಾಪಿತ ಜಮೀನಿನ ಮೇಲ್ಮೈಲಕ್ಷಣಗಳ ಬಗ್ಗೆ ಸ್ಥಳ ಪರಿಶೀಲನೆ ನಡೆಸಿದ ನಂತರ ಸ್ಥಳ ತನಿಖಾ ಟಿಪ್ಪಣಿ ಸಹಿತ ಪ್ರಾಥಮಿಕ ಅಧಿಸೂಚನೆ ಪ್ರಸ್ತಾವನೆಯನ್ನು ಸಲ್ಲಿಸುವುದು ಹಾಗೂ ಅಂತಿಮ ಅಧಿಸೂಚನೆ ಹೊರಡಿಸುವ ಮೊದಲು ಜಂಟಿ ಅಳತೆ ಕಾರ್ಯವನ್ನು ಪೂರೈಸಿ, ನಂತರ ಅಂತಿಮ ಅಧಿಸೂಚನೆ ಪ್ರಸ್ತಾವನೆ ಸಿದ್ಧಪಡಿಸುವುದು.
2. ದೇವಸ್ಥಾನ, ಸ್ಮಶಾನ, ಶಾಲೆ ಮತ್ತು ಆಟದ ಮೈದಾನ, ವಾಸದ ಮನೆಗಳು / ವಸತಿ ಪ್ರದೇಶಗಳನ್ನು ಆಯಕಟ್ಟಿಗೆ ಧಕ್ಕೆ ಉಂಟಾಗದಂತೆ ಸಾಧ್ಯವಾದಷ್ಟು ಭೂಸ್ವಾಧೀನ ಪ್ರಕ್ರಿಯೆಯಿಂದ ಹೊರತುಪಡಿಸುವುದು.
3. ಹಾಲಿ ನಡೆಯುತ್ತಿರುವ ವಿವಿಧ ಕೈಗಾರಿಕೆಗಳು, ರೋಗಗ್ರಸ್ಥ ಕೈಗಾರಿಕಾ ಘಟಕಗಳ ಪ್ರದೇಶಗಳನ್ನು ಆಯಕಟ್ಟಿಗೆ ಧಕ್ಕೆ ಉಂಟಾಗದಂತೆ ಸಾಧ್ಯವಾದಷ್ಟು ಭೂಸ್ವಾಧೀನ ಪ್ರಕ್ರಿಯೆಯಿಂದ ಹೊರತುಪಡಿಸುವುದು.
4. ಆಯಕಟ್ಟಿಗೆ ಧಕ್ಕೆ ಉಂಟಾಗದಂತೆ ತೋಟಗಳು, ಫಲವತ್ತಾದ ಜಮೀನು ಹಾಗೂ ವರ್ಷಕ್ಕೆ 2 ಬೆಳೆ ಬೆಳೆಯುವ ಜಮೀನುಗಳು, ತರಿ ಜಮೀನುಗಳನ್ನು ಭೂಸ್ವಾಧೀನ ಪ್ರಕ್ರಿಯೆಯಿಂದ ಹೊರತುಪಡಿಸುವುದು.
5. ಗ್ರಾಮಠಾಣಾದ ಸರಹದ್ದಿನಿಂದ ಗ್ರಾಮದ ಸುತ್ತಲೂ ವಿಸ್ತರಣೆಗಾಗಿ 100 ಮೀಟರ್ ವ್ಯಾಪ್ತಿಯ ಜಮೀನುಗಳನ್ನು ಹೊರತುಪಡಿಸುವುದು.

(ಎ.ಎ. ರಾಮಕೃಷ್ಣ)
ಸರ್ಕಾರದ ಅಧೀನ ಕಾರ್ಯದರ್ಶಿ (ಕೈ.ಅ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಇವರಿಗೆ:

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಕಾರ್ಯನಿರ್ವಾಹಕ ಸದಸ್ಯರು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ನೃಪತುಂಗ ರಸ್ತೆ, ಬೆಂಗಳೂರು.